ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗ್ರಾಮೀಣ ಪಶುವೈದ್ಯಕೀಯ ಆಸ್ಪತ್ರೆಯನ್ನು ತೆರೆಯುವ ಬಗ್ಗೆ

೩೩೩. (೨೧೬) ಶ್ರೀ ಎನ್ ಶಿವರಾವ್ (ಬಂಟವಾಳ).—

ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಪಶುಸಂಗೋಪನಾ ಪಶುವೈದ್ಯ ಸೇವೆಗಳು ಹಾಗೂ ತೋಟಗಾರಿಕ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸದಾಗಿ ಗ್ರಾಮೀಣ ಪಶುವೈದ್ಯಕೀಯ ಆಸ್ಪತ್ರೆಗಳನ್ನು ತೆರೆಯುವ ವಿಚಾರ ಸರ್ಕಾರದವರಿಗಿದೆಯೆ ?

ಆ) ಹಾಗಿದ್ದಲ್ಲಿ ಎಷ್ಟು ಮತ್ತು ಎಲ್ಲೆಲ್ಲಿ ಎಂಬ ವಿವರಗಳನ್ನು ಒದಗಿಸಬೇಕಾಗಿ ವಿನಂತಿ.

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಾಲ್ಲೂಕಿಗೊಂದು ಸಂಚಾರಿ ಪಶುವೈದ್ಯಕೀಯ ಆಸ್ಪತ್ರೆಯನ್ನು ಮಂಜೂರಾತಿ ಮಾಡುವಲ್ಲಿ ಸರ್ಕಾರದವರಿಗೆ ಇರುವ ತೊಂದರೆಗಳೇನು ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ (ಪಶುಸಂಗೋಪನಾ ಮತ್ತು ತೋಟಗಾರಿಕೆ ಮಂತ್ರಿಗಳು).—

ಅ) ಇಲ್ಲ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈಗಾಗಲೆ ಎಲ್ಲಾ ೮ ತಾಲ್ಲೂಕುಗಳಲ್ಲಿ ಸಂಚಾರಿ ಪಶು ಚಿಕಿತ್ಸಾಲಯಗಳನ್ನು ಸ್ಥಾಪಿಸಲಾಗಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಉತ್ತರ ಪತ್ರಿಕೆಯು ಕಳುವಾದ ಬಗ್ಗೆ

(೨೨೮) ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಇತ್ತೀಚೆಗೆ ಉತ್ತರ ಪತ್ರಿಕೆಗಳನ್ನು ಕಳ್ಳತನ ಮಾಡಿದ ಪ್ರಕರಣ ನಡೆದಿರುವುದು ನಿಜವೇ ?

ಆ) ಈ ಪ್ರಕರಣದಲ್ಲಿ ರಾಜ್ಯದ ಹಿರಿಯ ಅಧಿಕಾರಿಗಳ ಮಕ್ಕಳ ಕೈವಾಡವಿರುವುದು ನಿಜವೆ ?

ಇ) ಈ ಪ್ರಕರಣವನ್ನು ತನಿಖೆ ಮಾಡಲಾಗಿದೆಯೇ ?

ಈ) ತನಿಖೆ ಆಗಿದ್ದಲ್ಲಿ ತನಿಖಾ ವರದಿಯ ಸಾರಾಂಶವೇನು ?

ಉ) ತನಿಖಾ ವರದಿಯ ಆಧಾರದ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು)

ಅ) ಹೌದು.

ಆ) ಗೊತ್ತಿಲ್ಲ

ಇ) ಪ್ರಕರಣವು ನ್ಯಾಯಾಲಯದ ಮುಂದೆ ಇದೆ.

ಈ) ಮತ್ತು ಉ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕರ್ನಾಟಕ ರಾಜ್ಯದ ಶಿಶುವಿಹಾರಗಳಲ್ಲಿ ಕೆಲಸ ಮಾಡುವ ಆಯಾಗಳ ಬಗ್ಗೆ

(೨೩೯) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಶಿಶುವಿಹಾರಗಳಲ್ಲಿ ಕೆಲಸ ಮಾಡುವ ಆಯಾಗಳ ಸಂಖ್ಯೆ ಎಷ್ಟು ?

ಆ) ಇದರಲ್ಲಿ ಕೆಲಸ ಮಾಡುವ ಆಯಾಗಳಿಗೆ ತಿಂಗಳಿಗೆ ಕೊಡುತ್ತಿರುವ ಸಂಬಳ ಎಷ್ಟು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು)

ಅ) ೧,೨೧೬.

ಆ) ತಿಂಗಳಿಗೆ ರೂ ೫೦.೦೦ ಮಾತ್ರ

ರಾಜ್ಯದಲ್ಲಿ ವಿವಿಧ ಜಿಲ್ಲಾ ಪಠ್ಯ ಪುಸ್ತಕಭಂಡಾರಗಳಲ್ಲಿ ಅನುಪಯೋಗವಾಗಿ ಉಳಿದಿರುವ ಪುಸ್ತಕಗಳ ಬಗ್ಗೆ

ಶ್ರೀ ಎಂ. ಆನಂದರಾವ್ (ಶಿವಮೊಗ್ಗ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೇ ?

ಅ) ರಾಜ್ಯ ವಿವಿಧ ಜಿಲ್ಲಾ ಪಠ್ಯ ಪುಸ್ತಕ ಭಂಡಾರ (ಡಿಪೋಸ್) ಗಳಲ್ಲಿ ಅನುಪಯೋಗವಾಗಿ ಉಳಿದಿರುವ ಪುಸ್ತಕಗಳ ಮೌಲ್ಯವೆಷ್ಟು ಹಾಗೂ ಅದಕ್ಕೆ ಕಾರಣಗಳೇನು ?

ಆ) ಎಷ್ಟು ವರ್ಷಗಳಿಂದ ಈ ರೀತಿಯಾಗಿದೆ ?

ಇ) ಈ ರೀತಿಯ ನಷ್ಟವನ್ನು ತಡೆಗಟ್ಟಲು ಪಠ್ಯ ಪುಸ್ತಕ ರಚನೆ, ಮುದ್ರಣ ಇವುಗಳ ಯೋಜನೆ ಮಾಡಲಾಗುವುದೆ.

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು)

ಅ) ಉಳಿದಿರುವ ಪಠ್ಯಪುಸ್ತಕಗಳ ಮೌಲ್ಯ ಮುಖ್ಯ ಬೆಲೆಯ ಒಟ್ಟು ಜುಮ್ಲಾ ರೂ ೪೧,೪೬ ೨೧೩–೭೨

ಇದಕ್ಕೆ ಕಾರಣಗಳು.

೧) ಸರ್ಕಾರದ ನೀತಿಗನುಗುಣವಾಗಿ ಕಾಲ ಕಾಲಕ್ಕೆ ಜಾರಿಗೆ ತರಲಾದ ಪಠ್ಯ ವಿಷಯ (ಸಿಲಬಸ್) ಬದಲಾವಣೆಯಿಂದಾಗಿ ಅನುಪಯೋಗಿ ಯಾದಂತಹ ಪುಸ್ತಕಗಳೇ ಅತಿ ಹೆಚ್ಚು ಇರುತ್ತದೆ.

೨) ಬಹಳಷ್ಟು ಎಚ್ಚರವಹಿಸಿ ಪ್ರಯತ್ನ ಪಟ್ಟರೂ ಅತ್ಯಧಿಕ ಸಂಖ್ಯೆಯಲ್ಲಿ ಪ್ರತಿಗಳನ್ನು ವೈವಿಧ್ಯಸಂವಾಗ ಕೆಲವು ಪುಸ್ತಕಗಳು ಮುದ್ರಣ ಲೋಪಕ್ಕೊಳಗೊಂಡು ಕಟ್ಟಿರುತ್ತದೆ.

೩) ಸಾಗಾಣಿಕ ಮಾಡುವಾಗ ಜಖಂಗೊಂಡು ಕೆಲವು ಪುಸ್ತಕಗಳು ಹಾನಿಯಾಗಿರುತ್ತದೆ.

೪) ಪುಸ್ತಕಗಳನ್ನು ದಾಸ್ತಾನು (ಜೋಡಿಸಿ) ಮಾಡಿದಾಗ ಹಾನಿಯಾಗಿರುತ್ತದೆ.

ಆ) ಸುಮಾರು ೧೨ ವರ್ಷಗಳಿಂದಲೂ ಅನುಪಯೋಗಿ ಪುಸ್ತಕಗಳು ಶೇಖರಿಸಲ್ಪಟ್ಟಿವೆ.

ಇ) ಬೇಕಾದ ಎಲ್ಲ ಸಾಧಕಭಾದಕಗಳನ್ನು ಇಲಾಖೆಯು ತೀವ್ರ ರೀತಿಯಲ್ಲಿ ಪರಿಶೀಲಿಸುತ್ತಿದೆ.

ಬೇಸಿಗೆಯಲ್ಲಿ ಹಳ್ಳಿಗಳಿಗೆ ರಿಗ್‌ಗಳ ಮುಖಾಂತರ ನೀರನ್ನು ಒದಗಿಸುವ ಬಗ್ಗೆ

(೧೯೩) ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಈ ವರ್ಷದ ಬೇಸಿಗೆಯಲ್ಲಿ ಹಳ್ಳಿಗಳಿಗೆ ನೀರನ್ನು ಒದಗಿಸಲು ರಾಜ್ಯದಲ್ಲಿ ಎಷ್ಟು ರಿಗ್‌ಗಳನ್ನು ಉಪಯೋಗಿಸಲಾಯ್ತು.

ಆ) ಪ್ರತಿಯೊಂದು ಜಿಲ್ಲೆಗೆ ಎಷ್ಟು ರಿಗ್‌ಗಳನ್ನು ಪೂರೈಸಲಾಗಿದೆ :

ಇ) ಗುಲ್ಬರ್ಗಾ ಜಿಲ್ಲೆಯಲ್ಲಿ ಒಟ್ಟು ಎಷ್ಟು ಕೊಳವೆ ಬಾವಿಗಳನ್ನು ಹಾಕಲಾಗಿದೆ ಮತ್ತು ಇದಕ್ಕೆ ತಗುಲಿದ ವೆಚ್ಚವೆಷ್ಟು.

ಈ) ಇವುಗಳಲ್ಲಿ ವಿಫಲವಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ?